## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು-ಮಡಿಕೇರಿ

## ಸ್ಪೆಷಲ್ ಕೇಸ್(ಕರಪ್ಷನ್) ಸಂಖ್ಯೆ: 61/2016

| | | | |
|---|---|---|---|
| ಸಾಕ್ಷಿದಾರರ ಹೆಸರು | : | ನಾಗರಾಜ ದೇವಾಡಿಗ | ಪ್ರಾಸಾಃ 7 |
| ತಂದೆಯ ಹೆಸರು | : | ತಿಮ್ಮ ದೇವಾಡಿಗ | ಚಾಸಾಃ 9 |
| ವಯಸ್ಸು | : | 46 ವರ್ಷ | |
| ವೃತ್ತಿ | : | ವ್ಯವಸ್ಥಾಪಕರು, ಕರ್ನಾಟಕ ಬ್ಯಾಂಕ್, ಸೋಮವಾರಪೇಟೆ | |
| ವಾಸ | : | ಸೋಮವಾರಪೇಟೆ | |

ಸಾಕ್ಷಿಯನ್ನು ದಿನಾಂಕ **22-12-2023** ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯವಿಚಾರಣೆ: ಸರ್ಕಾರಿ ಅಭಿಯೋಜಕರಿಂದ:**

ದಿನಾಂಕ 21.05.2013 ರಿಂದ 2014 ರವರೆಗೆ ಮಡಿಕೇರಿಯ ಕರ್ನಾಟಕ ಬ್ಯಾಂಕ್ ನಲ್ಲಿ ಸಹಾಯಕ ವ್ಯವಸ್ಥಾಪಕರಾಗಿ ಕರ್ತವ್ಯ ಸಲ್ಲಿಸಿರುತ್ತೇನೆ.

ದಿನಾಂಕ 24.05.2013 ರಂದು ಲೋಕಾಯುಕ್ತ ಪೊಲೀಸ್ ಠಾಣೆಯಿಂದ ಇನ್ಸ್ಪೆಕ್ಟರ್ ಮತ್ತು ಇತರೆ ಸಿಬ್ಬಂದಿ ಬಂದಿದ್ದರು, ಅವರು ಶ್ರೀಮತಿ ಕಮಲ ಕೆ.ಎ. ಇವರನ್ನು ಸಹ ತಮ್ಮ ಜೊತೆ ಕರೆತಂದಿದ್ದರು, ಸದರಿ ಕಮಲ ನಮ್ಮ ಬ್ಯಾಂಕಿನಲ್ಲಿ ಲಾಕರ್ ನ್ನು ತೆರೆದಿದ್ದರು, ಸದರಿ ಲಾಕರ್ ನ ಸಂಖ್ಯೆ 84 ಇತ್ತು, ಅದನ್ನು ಪೊಲೀಸರ ಕೋರಿಕೆ ಮೇರೆಗೆ ತೆರೆಯಲಾಯಿತು. ಸದರಿ ಲಾಕರ್ ನಲ್ಲಿ 22 ಒಡವೆಗಳು ಹಾಗೂ ಕೆಲವು ದಾಖಲಾತಿಗಳು ಸಿಕ್ಕಿದವು. ಸದರಿ ಒಡವೆಗಳನ್ನು ಅಕ್ಕಸಾಲಿಗರ ಮೂಲಕ ತೂಕ ಮಾಡಿಸಿ ಮೌಲ್ಯಮಾಪನ ಮಾಡಿಸಿ ಮಹಜರು ಮಾಡಿ ಅಮಾನತುಪಡಿಸಿಕೊಂಡರು. ಸದರಿ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ. ಸದರಿ ಸದರಿ ಮಹಜರು ನಿಪಿ-192 ಇದ್ದು, ಅದರಲ್ಲಿರುವ ನನ್ನ ಸಹಿ ನಿಪಿ-**192(ಸಿ)** ಎಂದು ಗುರುತಿಸಲಾಯಿತು. ಸದರಿ ಒಡವೆಗಳನ್ನು ನೋಡಿದಲ್ಲಿ ಗುರುತಿಸುತ್ತೇನೆ. ಒಡವೆಗಳ ಗುರುತಿಸುವಿಕೆ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ. ಸದರಿ ಲಾಕರ್ ನಿಂದ 16 ದಾಖಲೆಗಳನ್ನು ಅಮಾನತುಪಡಿಸಿಕೊಂಡಿರುತ್ತಾರೆ. ಸದರಿ ದಾಖಲೆಗಳು ಈಗಾಗಲೇ ನಿಪಿ-191 ಎಂದು ಗುರುತಿಸಲಾಗಿದೆ.

ಲೋಕಾಯುಕ್ತ ಪೊಲೀಸರು ಕೇಳಿದ್ದ ಪ್ರಕಾರ ಕಮಲರವರಿಗೆ ಸಂಬಂಧಪಟ್ಟ ಬ್ಯಾಂಕ್ ಖಾತಾ ಹುತಾರನ್ನು ನೀಡಿರುತ್ತೇನೆ, ಖಾತಾ ತೆರೆಯಲು ನೀಡಿದ ನಮೂನೆ ಎಲ್ಲವನ್ನೂ ಒಟ್ಟಾಗಿ ನಿಪಿ-**193** ಎಂದು ಗುರುತಿಸಲಾಯಿತು.

**ಪಾಟೀಸವಾಲು- ಆರೋಪಿ ಪರವಾಗಿ ಶ್ರೀ ಎಂ.ಎನ್.ಎಸ್. ವಕೀಲರಿಂದ:**

ಏನೂ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸಾ. ಸ. ಇ. ಎ. ಒ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ.